24	ರಾಯಚೂರು	13	102.00
25	ರಾಮನಗರ	63	413.00
26	ಶಿವಮೊಗ್ಗ	211	690.00
27	ತುಮಕೂರು	258	768.33
28	ಉಡುಪಿ	172	967.50
29	ಉತ್ತರ ಕನ್ನಡ	89	251.00
30	ಯಾದಗಿರಿ	7	14.00
31	ಹೊರ ರಾಜ್ಯ	6	285.00
	ಒಟ್ಟು	**2668**	**11113.93**

ಪರಾ: ಸರ್ಕಾರದ ಆದೇಶದಂತೆ ರೂ.40.00 ಲಕ್ಷಗಳನ್ನು ನಗದು ಸಹಾಯಾನುದಾನಕ್ಕೆ ಮೀಸಲಿರಿಸಿದೆ.

(ವಿವರ: 11113.93 +40.00 = 11153.93)

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ)

ರೈತರಿಗೆ ಶೇಕಡ 3 ರಷ್ಟು ಬಡ್ಡಿ

511 (703) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ;

ಅ) 2009–10ನೇ ಸಾಲಿನಿಂದ ಸರ್ಕಾರವು ರೈತರಿಗೆ ಶೇಕಡ 3 ರಷ್ಟು ಬಡ್ಡಿ ದರದಲ್ಲಿ ಎಷ್ಟು ಹಣವನ್ನು ನೀಡಿದೆ; ಶೇಕಡ 1 ರಂತೆ ಎಷ್ಟು ಭರಿಸಲಾಗಿದೆ; 2012–13ನೇ ಸಾಲಿನಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ (ವಿವರ ನೀಡುವುದು);

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಯವರು) :

ಅ) ಸರ್ಕಾರವು ರೈತರಿಗೆ ನೇರವಾಗಿ ಕೃಷಿ ಸಾಲವನ್ನು ನೀಡುವ ವ್ಯವಸ್ಥೆ ಇರುವುದಿಲ್ಲ. ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ಕೃಷಿ ಸಾಲ ನೀಡುತ್ತವೆ.

- 2009–10ನೇ ಸಾಲಿನಲ್ಲಿ ಶೇಕಡ 3ರ ದರದಲ್ಲಿ ರೂ.3926.70 ಕೋಟಿ ಸಾಲವನ್ನು,
- 2010–11ನೇ ಸಾಲಿನಲ್ಲಿ ಶೇಕಡ 3ರ ದರದಲ್ಲಿ ರೂ.4887.22 ಕೋಟಿ ಸಾಲವನ್ನು,
- 2011–12ನೇ ಸಾಲಿನಲ್ಲಿ ಶೇಕಡ 3ರ ದರದಲ್ಲಿ ರೂ.5631.05 ಕೋಟಿ ಸಾಲವನ್ನು,
- 2012–13ನೆ ಸಾಲಿನಲ್ಲಿ (ಅಕ್ಟೋಬರ್ ಅಂತ್ಯಕ್ಕೆ) ಶೂನ್ಯಬಡ್ಡಿ ದರದಲ್ಲಿ ರೂ.2443.24 ಕೋಟಿ ಸಾಲವನ್ನು, ಶೇಕಡ 1 ರ ದರದಲ್ಲಿ ರೂ.962.25 ಕೋಟಿ ಸಾಲವನ್ನು ಹಾಗೂ
- ಶೇಕಡ 3ರ ದರದಲ್ಲಿ ಕೃಷಿ ಮಧ್ಯಮಾವಧಿ/ದೀರ್ಘಾವಧಿ ಸಾಲಗಳಿಗಾಗಿ ರೂ.179.84 ಕೋಟಿ ಸಾಲವನ್ನು ನೀಡಿದೆ.

ಈ ರೀತಿ ಕಡಿಮೆ ಬಡ್ಡಿದರದಲ್ಲಿ ವಿತರಿಸಿದ ಸಾಲಗಳಿಗೆ ಸರ್ಕಾರವು ಈ ಕೆಳಕಂಡಂತೆ ಬಡ್ಡಿ ಸಹಾಯಧನವನ್ನು ನೀಡಿದೆ.

2009–10ನೇ ಸಾಲಿನಲ್ಲಿ ರೂ.109.89 ಕೋಟಿ
2010–11ನೇ ಸಾಲಿನಲ್ಲಿ ರೂ.277.00 ಕೋಟಿ
2011–12 ನೇ ಸಾಲಿನಲ್ಲಿ ರೂ.435.00 ಕೋಟಿ
2012–13ನೇ ಸಾಲಿನಲ್ಲಿ ರೂ.219.03 ಕೋಟಿ
(ನವಂಬರ್ ಅಂತ್ಯದವರೆಗೆ)

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್

510 (702) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಯೋಜನೆಗೆ ಕೇಂದ್ರ ಸರ್ಕಾರದಿಂದ 2010–2011ರಿಂದ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಈ ಪೈಕಿ ಎಷ್ಟು ವೆಚ್ಚ ಮಾಡಲಾಗಿದೆ (ಯೋಜನೆಯ ಪೂರ್ಣ ವಿವರ ನೀಡುವುದು);